- -

ಮಿಸ್ ನಂ. 2/2024
ಪಿ ಡಬ್ಲ್ಯೂ: 1
ದಿಃ 17.06.2026.

**ಸಾಕ್ಷಿದಾರರನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಶ್ರೀ ಡಿ ಎನ್ ಎಂ ವಕೀಲರಿಂದಃ**

ನಾನು ನನ್ನ ಮೌಖಿಕ ವಿಚಾರಣೆಯ ಬದಲಾಗಿ ಪ್ರಮಾಣಪತ್ರವನ್ನು ಸಲ್ಲಿಸಿರುತ್ತೇನೆ. ಪ್ರಮಾಣಪತ್ರದಲ್ಲಿರುವ ಅಂಶವನ್ನು ನಾನೇ ಹೇಳಿ ಬರೆಸಿ ಸಹಿ ಹಾಕಿರುತ್ತೇನೆ. ಅದರಲ್ಲಿನ ಅಂಶಗಳು ಸತ್ಯವಾಗಿರುತ್ತವೆ.

**ಪಾಟೀ ಸವಾಲುಃ ಶ್ರೀ ಸಿ ವಿ ಡಿ ವಕೀಲರಿಂದಃ**

ನಾನು ನಿವೇಶನದ ಸಲುವಾಗಿ ಸದರಿ ಪ್ರಮಾಣ ಪತ್ರವನ್ನು ಸಲ್ಲಿಸಿರುತ್ತೇನೆ. ಪ್ರಮಾಣ ಪತ್ರದಲ್ಲಿ ಏನು ಬರೆದಿದೆ ಎಂದು ನಾನು ಓದಿಲ್ಲ. ನಾನು ಈ ದಿನ ನ್ಯಾಯಾಲಯಕ್ಕೆ ಪ್ರಮಾಣ ಪತ್ರವನ್ನು ಸೈಟಿನ ವಿಚಾರಕ್ಕೆ ಹಾಕಿರುತ್ತೇವೆ. ನನ್ನ ದಾವೆಯು ವಜಾ ಆಗಿರುವುದಿಲ್ಲ. ತಿಮ್ಮಯ್ಯನ ವಿರುದ್ದ ಸಲ್ಲಿಸಲಾಗಿರುವ ಓ.ಎಸ್. 442/18 ವಜಾ ಆಗಿರುತ್ತವೆ ಎಂದರೆ ಸರಿಯಲ್ಲ. ಸದರಿ ದಾವೆಯು 1 ವರ್ಷ 85 ದಿನಗಳ ಹಿಂದೆಯೇ ವಜಾ ಆಗಿರುತ್ತದೆ ಎಂದರೆ ಸರಿಯಲ್ಲ. ನಾನು ನನ್ನ ಕೇಸ್ ಇರುವಾಗ ನಾನು ನ್ಯಾಯಾಲಯಕ್ಕೆ ಬರುತ್ತಿದ್ದೆ ಎಂದರೆ ಸರಿ. ನನ್ನ ಕೇಸಿನ ಬಗ್ಗೆ ನನಗೆ ಮಾಹಿತಿ ಇದೆ ಎಂದರೆ ಸರಿ. ನ್ಯಾಯಾಲಯದ ಶುಲ್ಕ ವನ್ನು ಕಟ್ಟುವಂತೆ ನ್ಯಾಯಾಲಯವು ಆದೇಶ ಮಾಡಿರುತ್ತದೆ. ಸದರಿ ವಿಚಾರ ನಿಮಗೆ ತಿಳಿದಿದೆಯ ಎಂಬ ಪ್ರಶ್ನೆಗೆ ಸಾಕ್ಷಿಯು ನಾನು ನ್ಯಾಯಾಲಯದ ಶುಲ್ಕವನ್ನು ಕಟ್ಟಿರುತ್ತೇನೆ ಎಂದು ನುಡಿದಿರುತ್ತಾರೆ. ನ್ಯಾಯಾಲಯದ ಶುಲ್ಕವನ್ನು ಪಾವತಿಸದ ಕಾರಣ ನ್ಯಾಯಾಲಯವು ಸಾಕಷ್ಟು ಅವಕಾಶಗಳನ್ನು ನೀಡಿದ ನಂತರ ದಾವೆಯು ವಜಾ ಆಗಿರುತ್ತದೆ ಎಂದರೆ ಸಾಕ್ಷಿಯು ನಾನು ನ್ಯಾಯಾಲಯದ ಶುಲ್ಕವನ್ನು ಪಾವತಿಸಿರುತ್ತೇನೆ ಎಂದು ನುಡಿದಿರುತ್ತಾರೆ. ನನ್ನ ಪ್ರಮಾಣ ಪತ್ರದಲ್ಲಿ ನನ್ನ ದಾವೆಯು ವಜಾ ಆಗಿರುತ್ತದೆ ಎಂದು ಬರೆಸಿರುತ್ತೇನೆ ಎಂದರೆ ಸರಿಯಲ್ಲ. ನಾನು ಈ ದಿನ ನ್ಯಾಯಾಲಯಕ್ಕೆ ಯಾವುದೇ ದಾಖಲೆಯನ್ನು ಸಲ್ಲಿಸಿರುವುದಿಲ್ಲ. ನನ್ನ ಆರೋಗ್ಯ ಸರಿ ಇಲ್ಲ ಎಂದು ತೋರಿಸಲು ನ್ಯಾಯಾಲಯಕ್ಕೆ ನಾನು ದಾಖಲಾತಿಗಳನ್ನು ವಕೀಲರ ಮೂಲಕ ನೀಡಿರುತ್ತೇನೆ.

ಮುಂದುವರೆದ ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದು, ಕಾಲಾವಕಾಶ ನೀಡಲಾಗಿದೆ.

*(ತೆ.ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)*

ಓ ಹೇ ಕೇ ಸ ಇದೆ

ಅಪರ ಸಿವಿಲ್ ಮತ್ತು ಜೆ ಎಂ ಎಫ್ ಸಿ
**ಹೊಸದುರ್ಗ.**

Crl.Mis.

Notice is duly served to respondent No.1 and 2. Called out absent.

Sri. SKR Advocate filed Vakalath on behalf of respondent No.3 to 6. Same is taken on record.

Petitioner present. Petitioner counsel present.

Petitioner examined on oath as PW1 and got marked ExP1 to ExP4. Petitioner counsel submits no further evidence and submits to take arguments as heard.

**For Orders.**

**Call on**

**Addl. Civil Judge and JMFC.,**
**Hosadurga.**

**ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆ ಎಂ ಎಫ್ ಸಿ, ನ್ಯಾಯಾಲಯ, ಹೊಸದುರ್ಗ**

**ಕ್ರಿಮಿನಲ್ ಮಿಸ್ ನಂ.**

**ನಿಶಾನೆಯಾಗಿ ಗುರುತಿಸಲಾದ ದಾಖಲೆಗಳು**

| | | |
|---|---|---|
| ನಿಪಿ | 1 | ಅಲಭ್ಯ ಪ್ರಮಾಣ ಪತ್ರ |
| ನಿಪಿ | 2 | ವಂಶವೃಕ್ಷ ಪ್ರಮಾಣ ಪತ್ರ |
| ನಿಪಿ | 3 | ಆಧಾರ ಗುರುತಿನ ಪತ್ರದ ನೋಟರಿ ಪ್ರತಿಗಳು |
| ನಿಪಿ | 4 | ಪತ್ರಿಕಾ ಪ್ರಕಟಣೆ |

**ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆ ಎಂ ಎಫ್ ಸಿ, ನ್ಯಾಯಾಲಯ, ಹೊಸದುರ್ಗ**

**ಕ್ರಿಮಿನಲ್ ಮಿಸ್ ನಂ.**

**ನಿಶಾನೆಯಾಗಿ ಗುರುತಿಸಲಾದ ದಾಖಲೆಗಳು**

| | | |
|---|---|---|
| ನಿಪಿ | 1 | ಅಲಭ್ಯ ಪ್ರಮಾಣ ಪತ್ರ |
| ನಿಪಿ | 2 | ವಂಶವೃಕ್ಷ ಪ್ರಮಾಣ ಪತ್ರ |
| ನಿಪಿ | 3 | ಆಧಾರ ಗುರುತಿನ ಪತ್ರದ ನೋಟರಿ ಪ್ರತಿಗಳು |
| ನಿಪಿ | 4 | ಪತ್ರಿಕಾ ಪ್ರಕಟಣೆ |